ಸಾಕ್ಷಿಗೆ ಕನ್ನಡ ಭಾಷೆಯು ಸ್ವಲ್ಪ ಬರುತ್ತಿದ್ದುದ ಮತ್ತು ಸಾಕ್ಷಿಯು ತಾನು ತೆಲುಗು ಭಾಷೆಯು ತನಗೆ ಸಂಪೂರ್ಣವಾಗಿ ಗೊತ್ತಿದ್ದು ಮತ್ತು ಅದೇ ಭಾಷೆಯಲ್ಲಿ ಸಾಕ್ಷಿ ನುಡಿಯುತ್ತೇನೆ ಎಂದು ಹೇಳಿದ್ದರಿಂದ ಶ್ರೀ ಕೆ.ಎನ್.ಪಿ ವಕೀಲರಿಗೆ ತೆಲುಗು ಮತ್ತು ಕನ್ನಡ ಭಾಷೆಯು ಗೊತ್ತಿರುವುದರಿಂದ ಅವರನ್ನು ತರ್ಜುಮೆಗಾರರನ್ನಾಗಿ ಆರೋಪಿ ಪರ ವಕೀಲರ ಮತ್ತು ಅಭಿಯೋಜಕರ ಸಮ್ಮತಿಯ ಮೇರೆಗೆ ನೇಮಕ ಮಾಡಲಾಯಿತು.

ಶ್ರೀ ಕೆ.ಎನ್.ಪಿ ವಕೀಲರಿಗೆ ಪ್ರಮಾಣ ವಚನ ಬೋದಿಸಲಾಯಿತು ಮತ್ತು ಶ್ರೀ ಕೆ.ಎನ್.ಪಿ ವಕೀಲರ ಮೂಲಕ ಸಾಕ್ಷಿಗೆ ದಿಃ 20.03.2023 ರಂದು ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆ ಃ ಹಿ.ಸಾ.ಸ.ಅ ರವರಿಂದಃ

5. ನನ್ನ ಗಂಡನ ಅಕ್ಕನ ಮನೆಯು ನಂ.1, ಪ್ಲಾಟ್ ನಂ.5, ಹರಿ ನಿಲಯಂ, ರಾಮರಾವ್ ಲೇಔಟ್, ಕತ್ರಿಗುಪ್ಪೆ ಗೆ ನಾನು ಬಂದೆನು. ನನ್ನ ಮನೆಯಲ್ಲಿ ಇದ್ದ ಬ್ಯಾಂಕ್ ಅಕೌಂಟ್ ಪಾಸ್ ಬುಕ್, ಎ.ಟಿ.ಎಂ ಕಾರ್ಡ್ ಚಕ್ ಬುಕ್, 108 ಗ್ರಾಂ ಗೋಲ್ಡ್ ಆರ್ನಮೆಂಟ್ಸ್ ಮತ್ತು ನನ್ನ ಗಂಡನ ಬೈಕ್ ನಂ. ಎ ಪಿ 03 ಕೆ ಟಿ ಆರ್ 7780 ನನ್ನ ಮನೆಯಲ್ಲಿ ಇತ್ತು.ಇದೆಲ್ಲವನ್ನು ನನ್ನ ಗಂಡನ ಅಕ್ಕನಾದ ನೀರಾಜಾಕ್ಷಿಯು ನಮ್ಮ ಮನೆಯಿಂದ ತೆಗೆದು ಕೊಂಡು ಬಂದರು. ನನ್ನ ಗಂಡನ ಅಕ್ಕಳು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಹೇಳಿ ಇವೆಲ್ಲವನ್ನು ತೆಗೆದುಕೊಂಡು ಬಂದಳು ಮತ್ತು ಈ ಎಲ್ಲಾ ವಸ್ತುಗಳನ್ನು ನನ್ನ ಗಂಡನ ಅಕ್ಕಳು ತನ್ನ ಬಳಿಯೇ ಇಟ್ಟುಕೊಂಡಿದ್ದಳು. ನಾನು 2 ವರ್ಷಗಳವರೆಗೆ ನನ್ನ ಗಂಡನ ಅಕ್ಕಳಾದ ನೀರಾಜಾಕ್ಷಳ ಜೊತೆ ಚೆನ್ನಾಗಿ ಇದ್ದೆ. ಕೆಲವು ತಿಂಗಳುಗಳ ನಂತರ ನನಗೆ ಕೆಲ ಕೆಟ್ಟ ಕೆಟ್ಟ ಶಬ್ದಗಳಿಂದ ನೀರಾಜಾಕ್ಷಿಯು ಬೈಯಳು ಪ್ರಾರಂಭಿಸಿದಳು. ನನ್ನ ಮನಸ್ಸಿಗೆ ನೋವಾಯಿತು ಮತ್ತು ನನ್ನ ಮನಃಶಾಂತಿಗೋಸ್ಕರ ನಾನು ನನ್ನ ತವರು ಮನೆಯಾದ ಚಿತ್ತೂರಿಗೆ ಹೋದೆ. ಕೆಲ ದಿನಗಳ ನಂತರ ನಾನು ಮತ್ತೆ ನನ್ನ ತವರು ಮನೆಯಿಂದ ನೀರಾಜಾಕ್ಷಿ ರವರ ಮನೆಗೆ ವಾಪಸ್ಸು ಬಂದೆ. ಆದರೆ ನೀರಾಜಾಕ್ಷಿಯು ನನ್ನನ್ನು ಅವರ ಮನೆಯ ಒಳಗಡೆ ಸೇರಿಸಿಕೊಳ್ಳಲಿಲ್ಲ ಮತ್ತು ನನಗೆ ಬೈದು ಹೊರಗೆ ಹಾಕಿದರು.

6.ನನ್ನ ಗಂಡನು ಮರಣ ಹೊಂದಿದ್ದರಿಂದ ಅವರ ಮರಣ ಹೊಂದಿದ್ದಕ್ಕೆ ಕೆಲ ಬೆನಿಪಿಟ್ಸ್ ಹಣವು ನನ್ನ ಹೆಸರಿಗೆ ಬಂದಿತ್ತು ಮತ್ತು ಅದು ನನ್ನ ಖಾತೆಯಲ್ಲಿ ಇತ್ತು. ನೀರಾಜಾಕ್ಷಿಯು ನನ್ನ ಚಕ್ ಬುಕ್ ನ ಮೇಲೆ ನನ್ನ ಸಹಿಯನ್ನು ಪೋರ್ಜ್ ಮಾಡಿ ರೂ.30,00,000/- ಹಣವನ್ನು ನನ್ನ ಖಾತೆಯಿಂದ ಡ್ರಾ ಮಾಡಿ ಪಟ್ಟಾಭಿನಾಯ್ಡು ರವರ ಸಾಲದ ಖಾತೆಗೆ ರೂ. 30,00,000/- ಹಣವನ್ನು ವರ್ಗಾವಣೆ ಮಾಡಿಕೊಂಡಿದ್ದರು. ಅದೇ ರೀತಿ ಎಸ್.ಬಿ.ಹೆಚ್ ಬ್ಯಾಂಕ್ ನಲ್ಲಿ ನನ್ನ

ಖಾತೆ ನಂ. 62058437952 ದಲ್ಲಿ ರೂ.6,72,733/- ಇತ್ತು. ವಿಜಯ್ ನಾಯ್ಡು ರವರು ನಾನೇ ಬ್ಯಾಂಕಿಗೆ ಪತ್ರ ಬರೆದಿರುವ ಹಾಗೆ ಪತ್ರವನ್ನು ಬೆರದು ನನ್ನ ಸಹಿಯನ್ನು ಫೋರ್ಜ್ ಮಾಡಿ ಈ ರೂ.6,72,733/- ಹಣವನ್ನು ಪಟ್ಟಾಭಿನಾಯ್ಡು ರವರ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದರು. ನಾನು ಈ ರೀತಿಯಾಗಿದ್ದಕ್ಕೆ ನೀರಾಜಾಕ್ಷಿಯವರ ಮನೆಗೆ ಹೋಗಿ ಏಕೆ ಹೀಗೆ ಮೋಸ ಮಾಡಿದಿರಿ ಎಂದು ಕೇಳಿದ್ದಕ್ಕೆ ನೀರಾಜಾಕ್ಷಿ,ಪಟ್ಟಾಭಿನಾಯ್ಡು, ವಿಜಯ್ ರವರು ನನಗೆ ಬೆದರಿಸಿದರು ಮತ್ತು ಇನ್ನೊಮ್ಮೆ ಕೇಳಿದರೆ ನನ್ನನ್ನು ಮತ್ತು ನನ್ನ ಇಬ್ಬರು ಮಕ್ಕಳನ್ನು ಕೊಲ್ಲುತ್ತೇವೆ ಎಂದು ಹೆದರಿಸಿದರು.

7. ದಿಃ 16-01-2017 ರಂದು ಕುಮಾರ್ ಸ್ವಾಮಿ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದೆ. ನಾನು ದಾಖಲಿಸಿದ ದೂರನ್ನು ನೋಡಿದರೆ ಗುರುತಿಸಬಲ್ಲೆ. ನಾನು ಈಗ ದಾಖಲಿಸಿದ ದೂರನ್ನು ನೋಡುತ್ತಿದ್ದು ಇದು ಅದೇ ಆಗಿರುತ್ತದೆ. ಇದರಲ್ಲಿ ನನ್ನ ಸಹಿ ಇದ್ದು ಇದು ನನ್ನ ಸಹಿ ಆಗಿರುತ್ತದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

8. ಆರೋಪಿಗಳು ನನ್ನೊಂದಿಗೆ ರಾಜಿ ಮಾಡಿಕೊಳ್ಳುವುದಾಗಿ ಹೇಳಿ ಒಂದು ರೂ.5,00,000/- ಹಣದ ಚಕ್ ಮತ್ತು ನನ್ನ ಗಂಡನ ಬೈಕ್ ಅನ್ನು ನನಗೆ ವಾಪಸ್ಸು ನೀಡಿದರು. ನಾನು ಚಿತ್ತೂರಿಗೆ ಹೋಗಿ ರೂ. 5,00,000/- ಹಣದ ಚಕ್ ಅನ್ನು ನಗದೀಕರಣಕ್ಕಾಗಿ ಹಾಕಿದಾಗ ಅದು ಸ್ಟಾಪ್ ಪೇಮೆಂಟ್ ಎಂದು ವಾಪಸ್ಸು ಬಂತು. ನಂತರ ಮತ್ತೆ ಆರೋಪಿತರು ನನಗೆ ಮೋಸ ಮಾಡಿದ್ದಾರೆಂದು ತಿಳಿದುಕೊಂಡು ನಾನು ದಿಃ 10-04-2017 ರಂದು ವಾಪಸ್ಸು ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಗೆ ಬಂದು ಆರೋಪಿತರು ನೀಡಿದ ಚಕ್ ಮತ್ತು ಬೈಕ್ ಅನ್ನು ಪೊಲೀಸರಿಗೆ ನೀಡಿದೆ. ಪೋಲಿಸರಿಗೆ ನಾನು ಚಕ್ ಮತ್ತು ಬೈಕ್ ಅನ್ನು ನೀಡಿ ಮೋಸ ಮಾಡಿದರು ಎಂದು ಹೇಳಿದೆ. ಪೊಲೀಸರು ಬರವಣಿಗೆ ಮಾಡಿಕೊಂಡು ಚಕ್ ಅನ್ನು ತಮ್ಮ ಬಳಿ ಇಟ್ಟುಕೊಂಡರು ಮತ್ತು ಬೈಕ್ ಗೆ ಪೊಲೀಸರು ಸೀಲ್ ಅಂಟಿಸಿ ಅಲ್ಲಿಯೇ ಇಟ್ಟುಕೊಂಡರು. ಪೊಲೀಸರು ಬರವಣಿಗೆ ಮಾಡಿ ನನ್ನ ಸಹಿಯನ್ನು ಅದಕ್ಕೆ ಪಡೆದರು. ಈ ರೀತಿ ಬರವಣಿಗೆ ಮಾಡುವಾಗ ಅಲ್ಲಿ ಪುರುಷೋತ್ತಮ ಮತ್ತು ಶಾಂಬಾಶಿವ  ನಾಯ್ಡು ರವರು ಹಾಜರಿದ್ದರು. ನಾನು ವಿಜಯ್ ನಾಯ್ಡು ರವರಿಗೆ ಬೈಕ್ ಅನ್ನು ನೀಡಿದಾಗ ಅದು ಎಪಿ 03 ಕೆ ಟಿ ಆರ್ 7780 ಎಂದು ಇತ್ತು. ನಾನು ಪೊಲೀಸ್ ರವರಿಗೆ ಬೈಕ್ ಅನ್ನು ನೀಡಬೇಕಾದರೆ ಅದರ ನಂಬರ್ ಚೇಂಜ್ ಆಗಿತ್ತು ಆದರೆ ಇಂಜಿನ್ ನಂಬರ್ ಸೇಮ್ ಇತ್ತು. ನನ್ನ ಗಂಡನ ಈ ಬೈಕ್ ಹೀರೋ ಹೊಂಡಾ  ಆಮ್ ಬಿಷನ್ ಬೈಕ್

ಅನ್ನು ನೀಡಿದ್ದೇನೆ. ಪೋಲಿಸರು ನನ್ನಿಂದ ಚಕ್ ಮತ್ತು ಬೈಕ್ ಅನ್ನು ಪಡೆದಾಗ ನನ್ನ ಸಹಿಯನ್ನು ಪಡೆದಿರುತ್ತಾರೆ. ನಾನು ಮಾಡಿದ ಸಹಿಯನ್ನು ನೋಡಿದರೆ ಮತ್ತು ಬರವಣಿಗೆಯನ್ನು ನೋಡಿದರೆ ಗುರುತಿಸಬಲ್ಲೆ. ನಾನು ಈಗ ಒಂದು ದಾಖಲಾತಿಯನ್ನು ನೋಡುತ್ತಿದ್ದು ಇದಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಮತ್ತು ಇದು ನನ್ನ ಸಹಿ ಆಗಿರುತ್ತದೆ. ಸಾಕ್ಷಿಯು ದಿಃ 10-04-2017 ರ ಅಮಾನತ್ತು ಪಂಚನಾಮೆಯನ್ನು ಮತ್ತು ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಅಮಾನತ್ತು ಪಂಚನಾವೆಯನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ನೀಡಿದ ಚಕ್ ಅನ್ನು ನೋಡಿದರೆ ಗುರುತಿಸಬಲ್ಲೆ. ನಾನು ಪೊಲೀಸರಿಗೆ ನೀಡಿದ ನನ್ನ ಗಂಡನ ಬೈಕ್ ಅನ್ನು ನೋಡಿದರೆ ಗುರುತಿಸಬಲ್ಲೆ.

ಈ ಹಂತದಲ್ಲಿ ದಾಖಲಾತಿಗಳ ಹಾಜರಾತಿ ಮತ್ತು ಗುರುತಿಸುವಿಕೆಗಾಗಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದರಿಂದ ಮೂಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ